ದೂರವಾಣಿ ಸಂಖ್ಯೆ :080–2221233
ಫ್ಯಾಕ್ಸ್ ಸಂಖ್ಯೆ :080–22278803
ಅಂತರ್ಜಾಲ:www.kptcl.com
ಇ–ಮೇಲ್ ವಿಳಾಸ:director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್): ಯು40109ಕೆಎ1999ಎಸ್‌ಜಿಸಿ025521
ಕಂಪನಿ ಅಧಿಕೃತ ಕಛೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು 560 009.

ಸಂಖ್ಯೆ: ಕವಿಪ್ರನಿನಿ/ಕೆಸಿಓ–01/4976/2019–2020/ ದಿನಾಂಕ: 05 MAR 2020

## ಸುತ್ತೋಲೆ

EE (IT)
EE (IT)-1
EE (IT) (NW&DC)

ವಿಷಯ: ನಿವೃತ್ತರಾಗುವ ಅಧಿಕಾರಿಗಳ/ನೌಕರರ ಪಿಂಚಣಿ ಮತ್ತು ನಿವೃತ್ತಿ ಸೌಲಭ್ಯಗಳನ್ನು ಶೀಘ್ರಗತಿಯಲ್ಲಿ ಇತ್ಯರ್ಥಗೊಳಿಸುವ ಕುರಿತು.

ಉಲ್ಲೇಖ: 1.ನೌಕರರ ಸೇವಾ ನಿಯಮಗಳ ನಿಬಂಧನೆ 239 ಮತ್ತು 240.
2.ನಿರ್ದೇಶಕರು(ಹಣಕಾಸು), ಕವಿಪ್ರನಿನಿ ರವರ ದಿನಾಂಕ: 15/12/2010 ರ ಸುತ್ತೋಲೆ.

********

ನಿಗಮದ ಅಧಿಕಾರಿ/ನೌಕರರು ಸೇವೆಯಿಂದ ವಯೋನಿವೃತ್ತಿ ಹೊಂದುವ ಸಮಯದಲ್ಲಿ ಅವರ ಪಿಂಚಣಿ ಮಂಜೂರಾತಿ ಕಡತಗಳನ್ನು ತಯಾರಿಸುವ ಮತ್ತು ಸಲ್ಲಿಸುವ ಪ್ರಕ್ರಿಯೆಗೆ ಸಂಬಂಧಿಸಿದಂತೆ ನಿಗಮದ ಬಿಇಎಸ್‌ಆರ್ ನಿಬಂಧನೆ 239 ಮತ್ತು 240 ರಲ್ಲಿ ವಿವರವಾಗಿ ಕ್ರಮಗಳನ್ನು ನಿಗದಿಪಡಿಸಲಾಗಿದೆ. ಈ ಸಂಬಂಧ ಆಗಿಂದ್ದಾಗೆ ನಿಗಮದಿಂದ ಹಲವು ಸುತ್ತೋಲೆಗಳನ್ನು ಹೊರಡಿಸಿದರೂ ಕೂಡ ಸರಿಯಾದ ಕ್ರಮವನ್ನು ತೆಗೆದುಕೊಳ್ಳದೆ ನಿವೃತ್ತಿಯಾಗುವ ಕೆಲವು ದಿನಗಳ ಮೊದಲು ಪಿಂಚಣಿ ಕಡತಗಳನ್ನು ವಿಭಾಗ/ ವೃತ್ತ /ವಲಯ ಕಛೇರಿಗಳಿಂದ ಸಲ್ಲಿಸಲಾಗುತ್ತಿದೆ. ಆನಂತರ ವಯೋನಿವೃತ್ತಿ ದಿನಾಂಕದಂದೆ ಪಿಂಚಣಿ ಮಂಜೂರಾತಿಗಾಗಿ ಒತ್ತಡತರುವುದು ಸರ್ವೇಸಾಮಾನ್ಯವಾಗಿದೆ. ಇದರಿಂದ ಪಿಂಚಣಿ ಮಂಜೂರಾತಿ ಮತ್ತು ಅಧೀಕರಿಸುವ ಪ್ರಾಧಿಕಾರಿಗಳು ಸಂಬಂಧಿಸಿದ ದಾಖಲೆ/ ದಸ್ತಾವೇಜುಗಳನ್ನು ಪೂರ್ಣ ಪ್ರಮಾಣದಲ್ಲಿ ಪರಿಶೀಲಿಸಿ ಪಿಂಚಣಿ ಮಂಜೂರಾತಿ ಮತ್ತು ಅಧಿಕರಿಸಲು ಕಷ್ಟವಾಗುತ್ತಿರುತ್ತದೆ ಮತ್ತು ಸಕಾಲದಲ್ಲಿ ಪಿಂಚಣಿ ಮಂಜೂರಾತಿ ನೀಡಲು ಸಾಧ್ಯವಾಗದೆ ನಿವೃತ್ತಿ ಅಧಿಕಾರಿ/ ನೌಕರರಿಗೂ ತೊಂದರೆಯಾಗುತ್ತದೆ.

ನಿವೃತ್ತರಾಗಲಿರುವ ಅಧಿಕಾರಿ/ ನೌಕರರಿಗೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆ/ ಲೋಕಾಯುಕ್ತ/ ಎಸಿಬಿ/ ಕ್ರಿಮಿನಲ್ ಮೊಕದ್ದಮೆ ಇತರೆ ಸಂಬಂಧಿತ ಪ್ರಕರಣಗಳು ಬಾಕಿಯಿದೆಯೇ ಇಲ್ಲವೆ ಎಂಬುದನ್ನು ಸಹ ಪಿಂಚಣಿ ಮಂಜೂರಾತಿ ಪ್ರಾಧಿಕಾರವು ಖಚಿತಪಡಿಸಿಕೊಳ್ಳುವುದು ಒಂದು ಪ್ರಮುಖ ಅಂಶವಾಗಿರುತ್ತದೆ.

ಮೇಲಿನ ಹಿನ್ನೆಲೆಯಲ್ಲಿ ನಿಗಮದ ದಿನಾಂಕ: 15/12/2010 ರ ಸುತ್ತೋಲೆಯಲ್ಲಿ ನಮೂದಿಸಿರುವ ವಿಶೇಷ ಪ್ರಕರಣಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಸಾಮಾನ್ಯ ಪ್ರಕರಣಗಳಲ್ಲಿ ನಿಗದಿಪಡಿಸಿದ ನಿಯಾಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸಿ ಪಿಂಚಣಿ ಕಡತಗಳನ್ನು ಮಂಜೂರಾತಿ ಪ್ರಾಧಿಕಾರಕ್ಕೆ ಕನಿಷ್ಟ 3 ತಿಂಗಳ ಮುಂಚಿತವಾಗಿ ಸಲ್ಲಿಸಲು ಎಲ್ಲಾ ನಿಯಂತ್ರಣ ಅಧಿಕಾರಿಗಳಿಗೆ ಮತ್ತು ಸಂಬಂಧಿಸಿದ ವೇತನ ಬಟವಾಡೆ ಅಧಿಕಾರಿಗಳಿಗೆ ಈ ಮೂಲಕ ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.

ಗುಂಪು 'ಎ' ಅಧಿಕಾರಿಗಳ ಸೇವಾ ಪುಸ್ತಕ ಮತ್ತು ಸೇವಾ ಚರಿತ್ರೆ (History of Services) ನಿಗಮ ಕಚೇರಿಯ ವ್ಯವಸ್ಥಾಪಕರು (ಸಿಬ್ಬಂದಿ-2) ಶಾಖೆಯಲ್ಲಿ ನಿರ್ವಹಿಸಲಾಗುತ್ತಿದೆ. ಆದ್ದರಿಂದ ಗುಂಪು 'ಎ' ಅಧಿಕಾರಿಗೆ ಪಿಂಚಣಿ ಮತ್ತು ನಿವೃತ್ತಿ ಸೌಲಭ್ಯಗಳನ್ನು ಮಂಜೂರು ಮಾಡುವ ಮುನ್ನ ಸದರಿ ಶಾಖೆಯಿಂದ ಅಂತಹ ಅಧಿಕಾರಿಯ ವಿರುದ್ಧ ಯಾವುದೇ ಇಲಾಖಾ ವಿಚಾರಣೆ/ಲೋಕಾಯುಕ್ತ/ ಎಸಿಬಿ/ಕ್ರಿಮಿನಲ್ ಮೊಕದ್ದಮೆ ಅಥವಾ ಸಂಬಂಧಿತ ಪ್ರಕರಣಗಳು ಬಾಕಿ ಇದೆಯೇ ಇಲ್ಲವೇ ಎಂಬ ಮಾಹಿತಿಯನ್ನು ಉಪ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ) ರವರು ಆ ಶಾಖೆಯಿಂದ ಪಡೆದು ಇಲಾಖಾ ವಿಚಾರಣೆ ಮಾಹಿತಿ ಒದಗಿಸುವಾಗ ಪಿಂಚಣಿ ಮಂಜೂರಾತಿ /ಅಧಿಕರಿಸುವ ಪ್ರಾಧಿಕಾರಕ್ಕೆ ಒದಗಿಸುವುದು.

ಮೇಲೆ ಸೂಚಿಸಿರುವ ಅಗತ್ಯ ಕ್ರಮಗಳನ್ನು ನಿಗದಿತ ಕಾಲದಲ್ಲಿ ಸಂಬಂಧಿಸಿದ ಅಧಿಕಾರಿಗಳು ತೆಗೆದುಕೊಂಡಲ್ಲಿ ಪಿಂಚಣಿ ಕಡತಗಳ ಪರಿಶೀಲನೆ ಕಾರ್ಯ ಸುಸೂತ್ರವಾಗಲಿದ್ದು, ಸಂಬಂಧಿಸಿದ ಅಧಿಕಾರಿ/ ನೌಕರರುಗಳಿಗೆ ನಿಗದಿತ ಅವಧಿಯೊಳಗೆ ಪಿಂಚಣಿ ಮತ್ತು ನಿವೃತ್ತಿ ಸೌಲಭ್ಯಗಳನ್ನು ನೀಡಬಹುದಾಗಿರುತ್ತದೆ.

ಮೇಲೆ ಸೂಚಿಸಿರುವ ಕ್ರಮಗಳನ್ನು ಕೈಗೊಳ್ಳುವಲ್ಲಿ ಲೋಪದೋಷ ಮತ್ತು ವಿಳಂಬ ಕಂಡುಬಂದಲ್ಲಿ ಸಂಬಂಧಿಸಿದ ನಿಯಂತ್ರಣ ಅಧಿಕಾರಿ ಮತ್ತು ವೇತನ ಬಟವಾಡೆ ಅಧಿಕಾರಿಗಳನ್ನು ನೇರ ಹೊಣೆಗಾರರನ್ನಾಗಿಸಿ ಸೂಕ್ತ ಕ್ರಮವನ್ನು ಜರಗಿಸಲಾಗುವುದು.

ಮೇಲೆ ತಿಳಿಸಿರುವ ಎಲ್ಲಾ ಸೂಚನೆಗಳನ್ನು ಕಂಪನಿ ಮಟ್ಟದಲ್ಲಿ ಮಂಜೂರಾಗುವ ಪಿಂಚಣಿ ಪ್ರಕರಣಗಳಿಗೂ ಅನ್ವಯಿಸಿ ಜಾರಿಗೊಳಿಸಬೇಕೆಂದು ಸಂಬಂಧಿಸಿದ ಎಲ್ಲಾ ಅಧಿಕಾರಿಗಳಿಗೆ ಈ ಮೂಲಕ ತಿಳಿಸಲಾಗಿದೆ.

ನಿರ್ದೇಶಕರು (ಆ ಮತ್ತು ಮಾ.ಸಂ)
ಕವಿಪ್ರನಿನಿ

**ಪ್ರತಿಗಳು:**

1. ಎಲ್ಲಾ ವ್ಯವಸ್ಥಾಪಕ ನಿರ್ದೇಶಕರು, ಎಸ್ಕಾಂಗಳು/ಪಿಸಿಕೆಎಲ್.
2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂಗಳು.
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂಗಳು
4. ಆರ್ಥಿಕ ಸಲಹೆಗಾರರು (ಆಂತರಿಕ ಪರಿಶೋಧನೆ), ಕವಿಪ್ರನಿನಿ/ ಎಸ್ಕಾಂಗಳು
5. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ ಎಸ್ಕಾಂಗಳು.
6. ಹಿರಿಯ ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಪ್ರಸರಣ)/ ನಿರ್ದೇಶಕರು (ಹಣಕಾಸು)/ ನಿರ್ದೇಶಕರು (ಆಡಳಿತ ಮತ್ತು ಮಾ.ಸಂ), ಕವಿಪ್ರನಿನಿ, ಬೆಂಗಳೂರು.
7. ಆಪ್ತ ಕಾರ್ಯದರ್ಶಿಗಳು, ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ., ಬೆಂಗಳೂರು.

**ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ www.kptcl.com-->eprasarana ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.**

8. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ)/ ನಿಯಂತ್ರಣಾಧಿಕಾರಿ, ಕವಿಪ್ರನಿನಿ/ ಎಸ್ಕಾಂಗಳು.
9. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ ಉಪ ಲೆಕ್ಕನಿಯಂತ್ರಣಾಧಿಕಾರಿ, ಕವಿಪ್ರನಿನಿ/ ಎಸ್ಕಾಂಗಳು.
10. ನಿಗಮ ಕಾರ್ಯಾಲಯದ ಎಲ್ಲಾ ಅಧಿಕಾರಿಗಳು/ ಎಲ್ಲಾ ಲೆಕ್ಕಾಧಿಕಾರಿಗಳು(ಆಂ.ಪ), ಕವಿಪ್ರನಿನಿ, ಎಸ್ಕಾಂಗಳು.
11. ಕ್ರೋಢೀಕರಣ ಘಟಕ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
12. ಮಾಹಾ ಕಡತ.